ತೆಗೆಯದೆ ನಿರ್ವಾಹವಿರಲಿಲ್ಲ. ಒಳಗೆ ಬಂದ ಶಿವಶಂಕರನಿಗೆ ಮಂಚದ ಮೇಲೆ ಬೀಡಿ ಸೇದುತ್ತ ಕೂತಿದ್ದ ಒಬ್ಬ ದಡೂತಿ ಆಸಾಮಿ ಕಾಣಿಸಿದ. ಅಮ್ಮನ ಕಡೆ ನೋಡಿದ ಅವನಿಗೆ ಅವಳು, 'ನಿನ್ನ ಚಿಕ್ಕಪ್ಪ ಕಣೋ; ಅದೇ ಬೂದಿಗೇರಿ ವಸಂತ ಇದಾನಲ್ಲ ಅವನ ತಂದೆ. ಸುಮಾರು ವರ್ಷ ಆಯ್ತಲ್ಲ ನೋಡಿ, ಗುರುತು ಸಿಕ್ಕಿಲ್ಲ ಅನ್ಸುತ್ತೆ.'

ಆ ವ್ಯಕ್ತಿ, 'ಬಾರೋ ಇಲ್ಲಿ, ಏನೋ ನಿನ್ನ ಹೆಸರು? ಎಷ್ಟುದ್ದ ಬೆಳೆದಿದ್ದಾನೆ?' ಹೀಗೆ ಹೇಳುತ್ತ ಇರುವಾಗಲೇ ಶಿವಶಂಕರ ಅಡುಗೆ ಮನೆಗೆ ಹೋಗಿ ಅಲ್ಲಿಯೇ ಕೂತುಬಿಟ್ಟ. ಪುಸ್ತಕ ಚೀಲವನ್ನು ಬದಿಗೆ ಎಸೆದ. ಎಸೆದ ರಭಸಕ್ಕೆ ಪುಸ್ತಕಗಳು ಚೆಲ್ಲಾಪಿಲ್ಲಿಯಾದವು. ಆ ದಡೂತಿ ಆಸಾಮಿ ಹೊರಟ ಮೇಲೆಯೂ ಇವನು ಹೊರ ಬರಲಿಲ್ಲ. ರಾತ್ರಿ ಊಟಕ್ಕೆ ಕರೆದರೂ ಅವನು ಬರಲಿಲ್ಲ. 'ಯಾಕೋ? ಏನಾಯ್ತೋ?' ಅಮ್ಮನ ಕಾಳಜಿ ಅವನಿಗೆ ಅಲಗಿನಂತೆ ಇರಿಯಿತು. 'ನಾನು ಅಪ್ಪನಿಗೆ ಹುಟ್ಟಿದವನು ಅಲ್ಲವಂತೆ! ನೀನು ಯಾರ್‍ಯಾರೋ ಹತ್ತಿರ ಮಲಿಕೊತ್ತಿಯಂತೆ' ಛಟ್ಟನೆ ಅಂದುಬಿಟ್ಟ. ಅವಳಿಗೆ ನೆಲ ಕುಸಿದಂತೆ ಭಾಸವಾಯ್ತು. ಕಣ್ಣಲ್ಲಿ ನೀರು ತುಂಬಿಕೊಂಡಿತಾದರೂ ಒಂದು ಮಾತೂ ಬಾಯಿಂದ ಹೊರಬರಲಿಲ್ಲ. ರಾತ್ರಿಯಿಡಿ ಅವನು ನಿದ್ದೆ ಇಲ್ಲದೆ ಹೊರಳಾಡಿದ. ಅವನಿಗೇನು ಗೊತ್ತು, ಅವನ ತಾಯಿಗೂ ಅದೇ ಸ್ಥಿತಿಯೆಂದು.

ಮಾರನೆಯ ದಿನ ಇವನು ಏಳುವ ಹೊತ್ತಿಗೆ ಅವಳು ಕಾಣಲಿಲ್ಲ. ಇವನು ಮೊದಲು ತಲೆಕೆಡಿಸಿಕೊಳ್ಳಲಿಲ್ಲ. ಮುಖ ತೊಳೆದುಕೊಂಡು ಶಾಲೆಗೆ ಹೋದ. ಹಸಿವು ತಡೆಯಲಾರದೆ ಮಧ್ಯಾಹ್ನಕ್ಕೆಲ್ಲ ಮನೆಗೆ ಬಂದ. ಆಗಲೂ ಅವಳು ಕಾಣಲಿಲ್ಲ. ಇವನಿಗೆ ಎದೆ ಹೊಡೆದುಕೊಳ್ಳಲು ಶುರುವಾಯಿತು. ಅಲ್ಲಿ ಇಲ್ಲಿ ಕೇಳಿ ನೋಡಿದ. ಇವನ ಗಾಬರಿ ನೋಡಿ ಜನ ಏನು? ಏನು? ಎಂದು ಮುತ್ತಿಕೊಂಡರು. ಅಷ್ಟರಲ್ಲಿ ದುರ್ಗಮ್ಮನ ಬಾವಿಯಲ್ಲಿ ಯಾರೋ ಬಿದ್ದು ಸತ್ತಿದ್ದಾರಂತೆ ಎಂಬ ವರ್ತಮಾನ ತೇಲಿಬಂತು. ಎಲ್ಲರೂ ಓಡಿದರು. ಶಿವಶಂಕರ ಅಲ್ಲಿಗೆ ಹೋಗುವ ಹೊತ್ತಿಗೆ ಹೆಣವನ್ನು ನೆಲದ ಮೇಲೆ ಮಲಗಿಸಿದ್ದರು. ಊದಿಕೊಂಡು ವಿಕಾರವಾಗಿದ್ದ ಅದನ್ನು ನೋಡಲು ಯಾರಿಗೂ

